2
ಉದಯವಾಣಿ
ಮಂಗಳವಾರ | ಆಗಸ್ಟ್ | 7 | 2012

# ವಿವಿಧ ಸಂಸ್ಕೃತಿಗಳ ಒಗ್ಗೂಡುವಿಕೆ ಅನಿವಾರ್ಯ

**ಹುಬ್ಬಳ್ಳಿ:** ಇಲ್ಲಿನ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದಲ್ಲಿ ಸೋಮವಾರ ಇಂಡಿಯಾ ಪ್ಲಾಟ್‌ಫಾರಂ (ಐಪಿ)-ಯು ಫೆಂಟ್‌ನ ಭಾರತ ಶಾಖಾ ಕಚೇರಿಯನ್ನು ಕುಲಪತಿ ಪ್ರೊ|ಜೆ.ಎಸ್ ಪಾಟೀಲ ಉದ್ಘಾಟಿಸಿದರು.

ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ವಿವಿಧ ಸಂಸ್ಕೃತಿಗಳ ಒಗ್ಗೂಡುವಿಕೆ ಅನಿವಾರ್ಯ. ಇಂತಹ ಸಂದರ್ಭದಲ್ಲಿ ಒಂದು ಸಂಸ್ಕೃತಿ ಇನ್ನೊಂದು ಸಂಸ್ಕೃತಿಯನ್ನು ಪರಸ್ಪರ ಅರ್ಥ ಮಾಡಿಕೊಳ್ಳುವ ಅಗತ್ಯವಿದೆ. ಭಾರತೀಯ ಸಂಸ್ಕೃತಿ ಹೆಚ್ಚಿನ ಸಂದರ್ಭಗಳಲ್ಲಿ ತಪ್ಪಾಗಿ ನಿರೂಪಿಸಿರುವುದೇ ಹೆಚ್ಚು. ಇಂತಹ ತಪ್ಪು ನಿರೂಪಣೆಗಳಿಗೆ ಬಹಳ ಮುಖ್ಯವಾದಂತಹ ಕಾರಣವೆಂದರೆ ಇಂದಿನ ಸಮಾಜ, ವಿಜ್ಞಾನಗಳು ನಮ್ಮ ಸಂಸ್ಕೃತಿ ಹಾಗೂ ಪರಂಪರೆಯನ್ನು ಸರಿಯಾದ ರೀತಿಯಲ್ಲಿ ಅಧ್ಯಯನ ನಡೆಸುವಲ್ಲಿ ವಿಫಲವಾಗಿರುವುದೇ ಮುಖ್ಯ ಕಾರಣ ಎಂದು ಜೆ.ಎಸ್.ಪಾಟೀಲ ಹೇಳಿದರು.ಸಮಾಜ ವಿಜ್ಞಾನಗಳಿಗೆ ಹೊಸ ರೂಪ ಕೊಡುವಲ್ಲಿ ಹೊಸ ರೀತಿಯ ಸಂಶೋಧನೆ ಅಗತ್ಯ ಇದೆ. ಜೊತೆಗೆ ಭಾರತೀಯರಲ್ಲಿ ಸಂಶೋಧನಾ ಕೌಶಲ್ಯ ಬೆಳೆಸಬೇಕಾಗಿದೆ. ಈ ಸಲುವಾಗಿ ಯೂರೋಪಿನ ವಿಶ್ವವಿದ್ಯಾಲಯಗಳಲ್ಲಿ ಇರುವಂಥಹ ಸಂಶೋಧನಾ ಕೌಶಲ್ಯಗಳನ್ನು ಭಾರತೀಯ ವಿಶ್ವವಿದ್ಯಾಲಯಗಳಲ್ಲಿ ಅಳವಡಿಸಿಕೊಳ್ಳುವುದು ಈ ಸಂದರ್ಭದಲ್ಲಿ ಆಗಬೇಕಾಗಿದೆ ಎಂದರು.



**ಹುಬ್ಬಳ್ಳಿ: ಇಲ್ಲಿನ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದಲ್ಲಿ ಸೋಮವಾರ ಇಂಡಿಯಾ ಪ್ಲಾಟ್‌ಪಾರಂ (ಐಪಿ)-ಯುಫೆಂಟ್ ಭಾರತ ಶಾಖಾ ಕಚೇರಿಯನ್ನು ಕುಲಪತಿ ಜೆ.ಎಸ್ ಪಾಟೀಲ ಉದ್ಘಾಟಿಸಿದರು.**

ಜೊತೆಗೆ ಕಾನೂನು, ತಾಂತ್ರಿಕ, ವೈದ್ಯಕೀಯ ಹಾಗೂ ಇನ್ನಿತರ ಶೈಕ್ಷಣಿಕ ಕ್ಷೇತ್ರದಲ್ಲಿ ಯೂರೋಪಿನ ವಿಶ್ವವಿದ್ಯಾಲಯಗಳ ಜೊತೆ ಸಂಶೋಧನಾ ಸಂಬಂಧವನ್ನು ಬೆಳೆಸಬೇಕಾಗಿದೆ. ಈ ಅಗತ್ಯತೆ ಮನಗಂಡ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಯೂರೋಪಿನ ನಾಲ್ಕು ವಿಶ್ವವಿದ್ಯಾಲಯಗಳನ್ನು ಒಳಗೊಂಡ ಇಂಡಿಯಾ ಪ್ಲಾಟ್‌ಫಾರಂ (ಐಪಿ)-ಯು ಫೆಂಟ್‌ನ ಜೊತೆ ಒಪ್ಪಂದ ಮಾಡಿಕೊಂಡಿದೆ ಎಂದರು.

ಕುಲಸಚಿವರಾದ ಸುಭಾಸ ಮಾಲಖೇಡೆ, ಇಂಡಿಯಾ ಪ್ಲಾಟ್‌ಫಾರಂ (ಐಪಿ)ಯು ಫೆಂಟ್‌ನ ಪ್ರತಿನಿಧಿಗಳು ಹಾಗೂ ವಿವಿ ಸಿಬ್ಬಂದಿ ಇದ್ದರು.